Arrest of some Kannada Chalavalidars in Bangalore

275. Sri VATAL NAGARAJ (Chickpet).—

Will the Chief Minister be pleased to state :—

(*a*) when and where the Kannada Chalavalidars *viz.*, Sri S. K. Sampangi and Sri Narayanakumar were arrested when Bangalore Bundh took place on July 10th to protest the policy of the Central Government in not giving effect to the Mahajan Report ;

(*b*) whether it has come to their notice that the above persons were ill-treated by the Sub-Inspector of Police of Jayanagar Police Station in that Station ;

(*c*) if so, the action taken in that behalf ?

Sri VEERENDRA PATIL (Chief Minister).—

(*a*) These persons were arrested near Mysore Bank Circle, Bangalore at 12 Noon on 10th July in connection with some other case.

(*b*) No.

(*c*) Does not arise.

ಶ್ರೀ ವಾಟಾಳ್ ನಾಗರಾಜ್.—ಉತ್ತರದಲ್ಲಿ ಮೈಸೂರು ಬ್ಯಾಂಕ್ ಸರ್ಕಲ್ ಬಳಿ 12 ಗಂಟೆ ವೇಳೆಯಲ್ಲಿ ದಸ್ತಗಿರಿ ಮಾಡಲಾಗಿದೆ ಎಂದು ತಿಳಿಸಿದೆ. ಅವರು 7, 8 ಮತ್ತು 9 ನೆಯ ತಾರೀಖು ಗಳಲ್ಲಿ ನನ್ನ ಜೊತೆಯಲ್ಲಿ ಪೂಜಿಂಗ್‌ನಲ್ಲಿದ್ದರು. ಆದರೆ ಬೆಂಗಳೂರು ಸಿಟಿ ಪೋಲೀಸಿನವರು 10 ನೆಯ ತಾರೀಖು 12 ಗಂಟೆಯಲ್ಲಿ ಪೆರವಣಿಗೆ ಹೋದಾಗ ಏಕೆ ಕಿಡಿದರು ?

† ಶ್ರೀ ವೀರೇಂದ್ರ ಪಾಟೀಲ್.—ಅವರಮೇಲೆ ಬಿ.ಟಿ.ಎಸ್. ಕಂಡಕ್ಟರು ಒಂದು ಕಂಪ್ಲೈಂಟ್ ಕೊಟ್ಟಿದ್ದರು. ಅದರ ಪ್ರಕಾರ ದಸ್ತಗಿರಿ ಮಾಡಲಾಗಿದೆ ಮತ್ತು ಅವರನ್ನು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಪ್ರೊಡ್ಯೂಸ್ ಮಾಡಲಾಗಿದೆ. ಈ ಕೇಸು ಈಗ ಸಬ್‌ಜುಡಿಸ್ ಇದೆ. ನಾರಾಯಣ ಕುಮಾರ್ ಮತ್ತು ಅವರ ಜೊತೆಗಾರರೂ ಸೇರಿ ಕಂಡಕ್ಟರ ಬ್ಯಾಗ್ ಕಸುಕೊಂಡು ಅದರಲ್ಲಿದ್ದ 13 ರೂಪಾಯಿ ಮತ್ತು ಟಿಕೆಟ್ ಬುಕ್ ತೆಗೆದುಕೊಂಡು ಕಂಡಕ್ಟರನ್ನು ಬಡಿದಿದ್ದಾರೆ ಎಂದು ಕಂಪ್ಲೈಂಟಿನಲ್ಲಿದೆ. ಮತ್ತು ಅದರಿಂದ ಗಾಯವಾಗಿದೆ ಮತ್ತು ಬಸ್ಸಿಗೆ ಬೆಂಕಿ ಹಚ್ಚಿದ್ದಾರೆ ಎಂದು ಕಂಪ್ಲೈಂಟಿನಲ್ಲಿ ಇರುವುದರಿಂದ ಅದರ ಪ್ರಕಾರ ಕೇಸು ರಿಜಿಸ್ಟರು ಮಾಡಿ ನಂಬಂಧಪಟ್ಟವರನ್ನು ಅರೆಸ್ಟ್ ಮಾಡಿ ಮ್ಯಾಜಿಸ್ಟ್ರೇಟರ ಮುಂದೆ ಪ್ರೊಡ್ಯೂಸ್ ಮಾಡಿದ್ದಾರೆ, ಕೇಸು ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲಿಲ್ಲ. ತಾವು ಬೆಂಗಳೂರು ಬಂದಿನ ದಿವಸ ತಮ್ಮ ಸರ್ಕಾರದ ಕೈತಪ್ಪಿಯಲ್ಲಿ ಮಹಾಜನ್ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ತಮಗೆ ಶಕ್ತಿ ಇಲ್ಲ ಅಂತ ಹೇಳಿ ತಮಗೆ ಶಕ್ತಿ ಬರಲಿ ಬೆಂಬಲ ಸಿಕ್ಕಲಿ ಎಂಬ ಉದ್ದೇಶದಿಂದ ಚಳುವಳಿ ಮಾಡುವುದಕ್ಕೆ ಹೊರಟಾಗ 12 ಗಂಟೆ ಟೈಮಿನಲ್ಲಿ ಅರೆಸ್ಟ್ ಮಾಡುವುದಕ್ಕೆ ಕಾರಣ ಏನಿತ್ತು ? ಬೇರೆ ಟೈಮಿನಲ್ಲಿ ಅರೆಸ್ಟ್ ಮಾಡುವುದಕ್ಕೆ ಆಗುತ್ತಾ ಇರಲಿಲ್ಲವೇ ? ಅವರು ಅಬ್‌ಸ್ಕಾಂಡ್ ಆಗಿದ್ದರೆ, ಯಾವ ದೇಶಕ್ಕೆ ಹೊರಟುಹೋಗಿದ್ದರು ? ಹಿಂದಿನ ದಿವಸ ಮೀಟಿಂಗ್ ಮಾಡಿದ್ದರು. ಅವತ್ತೇ ಅರೆಸ್ಟ್ ಮಾಡುವ ಉದ್ದೇಶ ಏನಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಪೆರವಣಿಗೆಯಲ್ಲಿ ಇದ್ದರೆ ಹಿಡಿಯಬಾರದು, ಆಮೇಲೆ ಹಿಡಿಯಬೇಕು, ಮನೆಯಲ್ಲಿ ಹಿಡಿಯಬೇಕು, ಹೊರಗಡೆ ಹಿಡಿಯಬೇಕು ಅಂತ ಹೇಳಿ ಕಾನೂನು ಇಲ್ಲ. ತಪ್ಪು ಮಾಡಿದಾಗ ನಿರ್ದಿಷ್ಟವಾಗಿ ಐಲೇಷನ್ ಮಾಡಿ ಬಿ. ಟಿ. ಎಸ್. ಕಂಡಕ್ಟರು ದೂರು ಕೊಟ್ಟಿದ್ದರಿಂದ ಅದರ ಮೇಲೆ ಕ್ರಮ ತೆಗೆದುಕೊಳ್ಳಿತಕ್ಕ ಜವಾಬ್ದಾರಿ ಪೋಲೀಸ್‌ನವರದಾಗಿದೆ. ಆ ರೀತಿಯಿಂದ ಕ್ರಮ ತಗೆದುಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರಕ್ಕೆ ಬೆಂಬಲ ಕೊಡುವ ಉದ್ದೇಶದಿಂದ ನಡೆಸಿದ ಚಳುವಳಿ ಇದು ಎಂದು ಮಾನ್ಯ ಸದಸ್ಯರು ಹೇಳಿದರು. ಹಾಗಿದ್ದರೆ ಈ ಚಳುವಳಿಗೆ ಸರ್ಕಾರದ ಪೂರ್ಣ ಬೆಂಬಲವಿದೆ ಎಂದು ತಿಳಿದುಕೊಳ್ಳೋಣವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಆ ರೀತಿಯಿಂದ ಅಭಿಪ್ರಾಯ ಪಟ್ಟಿದ್ದಾರೆ, ನಾವು ಚಳುವಳಿಗೆ ಬೆಂಬಲ ಕೊಟ್ಟಿದ್ದೇವೆ ಅಂತ ಅಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಆ ದಿವಸ ಪ್ರೊಸೆಷನ್ ಪ್ರಾರಂಭವಾದದ್ದೇ ನನಗೆ ಗೊತ್ತಿದ್ದ ಮುಟ್ಟಿಗೆ ಮೈಸೂರು ಬ್ಯಾಂಕಿನ ಚೌಕದಿಂದ. ಅವರನ್ನು ಆಗಲೇ ಅಲ್ಲೇ ಅರೆಸ್ಟ್ ಮಾಡಿದರೇ? ಅವರ ಮೇಲೆ ದೂರು ಯಾವತ್ತು ಬಂತು ?

ಶ್ರೀ ವೀರೇಂದ್ರ ಪಾಟೀಲ್.—10ನೇ ತಾರೀಖು ಅರ್ಲಿ ಮಾರ್ನಿಂಗ್ 1-10 ಎ. ಎಂ. ಮಾರನೇ ದಿವಸ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೈಸೂರು ಬ್ಯಾಂಕಿನ ಚೌಕದಲ್ಲಿ ಸಾವಿರಾರು ಜನ ಸೇರಿದ್ದರು, ಅಂತಹ ಸಂದರ್ಭದಲ್ಲಿ ಪೋಲೀಸನವರು ಹೋಗಿ ಅವರಿಬ್ಬರನ್ನು ಅರೆಸ್ಟ್ ಮಾಡಿದರು. ಆಗ ಗದ್ದಲ, ಗಲಭೆ ಗೊಂದಲವಾಯಿತು ಇದಕ್ಕೆ ಪೋಲೀಸ್‌ನವರು ಕಾರಣರಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಚಳುವಳಿ ಮಾಡುವ ಹೆನರಿನಲ್ಲಿ ಅನೇಕ ರೀತಿಯ ಕೆಲಸಗಳು ಜರುಗುತ್ತವೆ, ಬಸ್ಸಿಗೆ ಬೆಂಕಿ ಹಾಕುತ್ತಾರೆ, ರೈಲ್ವೆ ಟ್ರ್ಯಾಕ್ ನಡಿಲಸುತ್ತಾರೆ, ಕಲ್ಲು ಒಗೆಯುತ್ತಾರೆ ಯಾವ ಸರ್ಕಾರವೇ ಆಗಲಿ ಇದನ್ನು ಸಹನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮಹದೇವ ಜಿ. ಬಣಕಾರ್.—ಮಹಾರಾಷ್ಟ್ರದಲ್ಲಿ ಮಹಾಜನ್ ಕಮಿಷನ್ ರಿಪೋರ್ಟನ್ನು ಕಾರ್ಯಗತಮಾಡದಂತೆ, ಪಟಾನ್ಕರ್ ಫಾರ್ಮುಲಾ ಜಾರಿಗೆ ತರುವಂತೆ ಸರ್ಕಾರವೇ ಚಳುವಳಿಗಾರರಿಗೆ ಬೆಂಬಲ ನೀಡಿದಂತೆ ಮೈಸೂರು ಸರ್ಕಾರದವರೂ ಕೂಡ ಏಕೆ ಬೆಂಬಲ ನೀಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಅದು ಮಾನ್ಯಸದಸ್ಯರ ಅಭಿಪ್ರಾಯದ ಪ್ರಶ್ನೆ. ಆದರೆ ಸರ್ಕಾರ ಈ ತರಹದ ಚಳುವಳಿಗಳಿಗೆ ಬೆಂಬಲ ನೀಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಂಜಂಗಿ ಮತ್ತು ನಾರಾಯಣಕುಮಾರ್ ಇವರ ಮೇಲೆ ಒಂದು ಸತ್ಯಕ್ಕೆ ದೂರವಾದ ಆಪಾದನೆ ಹೊರಿಸಿ ಕೇಸುಹಾಕಿವ್ದಾರೆ, ಅದೂ ಅಲ್ಲದೇ ಅವರಿಬ್ಬರನ್ನೂ ಕರೆದುಕೊಂಡು ಹೋಗಿ ಜಯನಗರದ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಇನ್‌ಸ್ಪೆಕ್ಟರು ಮತ್ತು ಕಾನ್‌ಸ್ಟೇಬಲ್ಲು ಸಿಕ್ಕಾಪಟ್ಟೆ ಹೊಡೆದರು ಅಂತ ಹೇಳಿ ಗೊತ್ತಾಗಿದೆ. ಹಾಗೇನಾದರೂ ಇದ್ದರೆ ಆ ಪೋಲೀಸ್‌ನವರ ಮೇಲೆ ಏನು ಕ್ರಮ ಕೈಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲೇ ಹೇಳಿದ್ದೇನೆ. ಆ ರೀತಿ ದೂರು ಬಂದಿಲ್ಲ.

expenditure incurred by Chitradurga Municipal Council

331. Sri G. DUGGAPPA (Bharmasagara).—

Will the Minister of Stae for Municpal Administration be pleased to state :—

(*a*) whether it has come to the notice of Government that the Chitradurga Municipal Council did not conduct the monthly meetings for one year since April, 1968 ;

(*b*) whether the said Municipal Council did incur any expenditure during this period :

(*c*) if so, the total amount of expenditure incurred during the above period ;